**ಸಾಕ್ಷಿಯನ್ನು ದಿಃ25.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಿಪಿ - 1 ಕ್ಕೆ ಹಾಗೂ ಪ್ರತಿವಾದಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಗಳು ದಿಃ27.04.2011 ರಂದು ಸ್ವಾಧೀನ ರಹಿತ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ.

3. ಪ್ರತಿವಾದಿಗಳು ದಿಃ 27.04.2011 ರಂದು ಸದರಿ ಕರಾರು ಪತ್ರವನ್ನು ನಿಮ್ಮಿಂದ ವಾಪಸ್ ಪಡೆದು, ನಿಮಗೆ ಬಡ್ಡಿ ಸಹಿತ ಹಣ 3 ಲಕ್ಷ 50 ಸಾವಿರ ವಾಪಸ್ ನೀಡಿ ದಿಃ 24.04.2013 ರಂದು ಕರಾರು ರದ್ದತಿ ಪತ್ರ ಪೇಪರ್ ಮಾಡಿಸಿ ದಿಃ 25.04.2013 ರಂದು ನೊಂದಣಿ ಸಹ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದ 2 ಎಕರೆ 19 ಗುಂಟೆಯನ್ನು 2011 ರಲ್ಲಿ ಕರಾರು ಪತ್ರ ಮಾಡಿಕೊಟ್ಟಿದ್ದರು, ದಿಃ 24.04.2013 ರಂದು 1 ಎಕರೆ 19 ಗುಂಟೆ ವಾಪಸ್ ಬರೆದುಕೊಡಿ ಎಂದು ಹೇಳಿ, ಪುನಃ 1 ಲಕ್ಷ 25 ಸಾವಿರ ಹಣ ಪಡೆದು 1 ಎಕರೆಯನ್ನು ಪುನಃ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

4. ಕರಾರು ರದ್ದತಿ ಪತ್ರವನ್ನು ದಿಃ 25.04.2013 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ಮಾಡಿಸಿದ್ದಾರೆ ಎಂದರೆ, ಸರಿಯಲ್ಲ.

5. ಸದರಿ ರದ್ದತಿ ಪತ್ರಕ್ಕೆ ಸಾಕ್ಷಿಯಾಗಿ ತಿರುಮಲಾಪುರದ ಲೋಕೇಶ ಬಿನ್ ಭೀಮಶೆಟ್ಟಿ ಹಾಗೂ ಹೆಚ್.ಎಸ್ ಮಹಾದೇವಪ್ಪ ಬಿನ್ ಸೋಮಶೇಖರಪ್ಪ ರವರು ಸಹಿ ಮಾಡಿದ್ದಾರೆ ಎಂದರೆ, ಹೌದು.

6. ಸದರಿ ರದ್ದತಿ ಪತ್ರ ಮಾಡಿಸಿದ್ದರಿಂದ ನೀವು ಹೇಳುವಂತೆ ಪುನಃ 1 ಲಕ್ಷ 25 ಸಾವಿರಕ್ಕೆ ಬರೆದುಕೊಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ.

7. ಕರಾರು ಪತ್ರವನ್ನು ಮಾಡುವ ಸಮಯದಲ್ಲಿ ನೀವು, ಸಾಕ್ಷಿದಾರರು ಹಾಗೂ ಪತ್ರ ಬರಹಗಾರರು ಶಾಮೀಲಾಗಿ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

8. ರದ್ದತಿ ಪತ್ರಕ್ಕೆ ಸಹಿ ಹಾಕಿದ ಸಾಕ್ಷಿದಾರರೇ ನೀವು ಹಾಜರುಪಡಿಸಿದ ಕರಾರು ಪತ್ರಕ್ಕೆ ಸಹ ಸಾಕ್ಷಿದಾರರು ಎಂದರೆ ಸರಿ.

9. ದಿಃ 25.04.2013 ರಲ್ಲಿ ನಿಪಿ - 1 ನೊಂದಣಿಯಾಗಿದೆ ಎಂದರೆ ಸರಿ. ಆಗ ಸಮಯ ಬೆಳಿಗ್ಗೆ 11 ಗಂಟೆ 31 ನಿಮಿಷ 53 ಸೆಕೆಂಡ್ ಆಗಿತ್ತು ಎಂದರೆ ಸರಿ.

10. ರದ್ದತಿ ಪತ್ರ ಬರೆಸುವ ಸಮಯದಲ್ಲಿ ಅವಿದ್ಯಾವಂತರಾದ ಪ್ರತಿವಾದಿಗಳ ಕಣ್ಣುತಪ್ಪಿಸಿ ನಿಪಿ - 1 ನ್ನು ಸೃಷ್ಠಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ.

11. ನಿಪಿ - 1 ನ್ನು ಮಾಡುವ ಸಮಯದಲ್ಲಿ ದಾವಾ ಸ್ವತ್ತು ನಿಮ್ಮ ಹೆಸರಿನಲ್ಲಿ ಇರದಿದ್ದರೂ, ಪ್ರತಿವಾದಿಳ ಸ್ವಾಧೀನದಲ್ಲಿ ಇರುವ ಜಮೀನನ್ನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಅಳತೆ ಮಾಡಲು ಪ್ರಯತ್ನ ಮಾಡಿದ್ದೀರಾ ಎಂದರೆ ಸರಿಯಲ್ಲ.

12. ಆ ಸಮಯದಲ್ಲಿ ಪ್ರತಿವಾದಿಗಳು ಬೈಲಕುಪ್ಪೆ ಠಾಣೆಗೆ ಹಾಗೂ ನಿಮಗೆ ದಿಃ 05.03.2018 ರಂದು ನೊಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ.

13. ಸದರಿ ನೊಟೀಸನ್ನು ನೀವು ಪಡೆಯದೇ ದುರುದ್ದೇಶದಿಂದ ಹಿಂದಿರುಗಿಸುತ್ತೀರಾ ಎಂದರೆ ಸರಿಯಲ್ಲ.

14. ದಾವಾ ಸ್ವತ್ತಿನ ಮೇಲೆ ಪ್ರತಿವಾದಿಗಳು ಬ್ಯಾಂಕಿನಿಂದ ಸಾಲ ಪಡೆಯುತ್ತಾರೆ ಎಂದರೆ, ಕರಾರು ಪತ್ರ ಆಗುವ ಮುಂಚೇನೇ ಪಡೆದಿದ್ದರು. ಯಾವ ವರ್ಷದಲ್ಲಿ ಪಡೆದಿದ್ದರು ಎಂದರೆ, ನನಗೆ ಗೊತ್ತಿಲ್ಲ.

15. ನಿಪಿ-1 ರಲ್ಲಿರುವಂತೆ ದಾವಾ ಸ್ವತ್ತಿನ ಚಕ್ಕುಬಂದಿ ಗೊತ್ತಾ ಎಂದರೆ, ಗೊತ್ತು. ಪೂರ್ವಕ್ಕೆಃ ಪ್ರತಿವಾದಿಗಳ ಜಾಗ ಹಾಗೂ ಚಿಕ್ಕ ರಸ್ತೆ, ಪಶ್ಚಿಮಕ್ಕೆಃ ಪ್ರತಿವಾದಿಗಳ ಜಾಗ, ಉತ್ತರಕ್ಕೆಃ ನಾಗರಾಜು ಸರಸ್ವತಿ ರವರ ಜಮೀನು ಹಾಗೂ ದಕ್ಷಿಣಕ್ಕೆಃ ವಿಶ್ವನಾಥ ರವರ ಜಮೀನು.

16. ದಾವಾ ಸ್ವತ್ತಿನಲ್ಲಿ ಈಗ ಯಾವ ಬೆಳೆ ಮಾಡಿದ್ದಾರೆ ಎಂದರೆ, ಕಾಫಿ ಮತ್ತು ಸಿಲ್ವರನ್ನು ನಾನು ಹಾಕಿದ್ದೇನೆ ಎಂದು ನುಡಿಯುತ್ತಾರೆ.

17. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು 2001 ರಿಂದಲೂ ಬೋರ್ ವೆಲ್ ಹಾಕಿಸಿ ಕಾಫಿ, ಸಿಲ್ವರ್ ಬೆಳೆದು ಅಭಿವೃದ್ಧಿಪಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಲಪಟಾಯಿಸಲು ಹಾಗೂ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ, ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. 2011 ರಲ್ಲಿ ನಿಮ್ಮಿಂದ ಪಡೆದ ಹಣ ವಾಪಸ್ ನೀಡಿ ರದ್ದತಿ ಪತ್ರ ಮಾಡಿಸಿದ್ದರಿಂದ ನಿಮಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ದಾವಾ ಆಸ್ತಿಯ ಮೇಲೆ ಇಲ್ಲ ಎಂದರೆ ಸರಿಯಲ್ಲ.

19. ನಿಮಗೆ ಮತ್ತು ಪ್ರತಿವಾದಿಳಿಗೆ ಯಾವುದೇ ಕ್ರಯದ ವ್ಯವಹಾರ ಆಗದೇ ಇದ್ದರಿಂದ ಈ ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ನೀ ಅರ್ಹರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ